

**ಲಲಿತಾ ಕೆ. ಹೊಸಪ್ಯಾಟಿ**

ಕಲೆ: ಸಂತೋಷ್ ಸಸಿಹಿತ್ಲು

# ಕನ್ನಡ ತಾಯಿಗೆ ನಮಿಸು

ಕನ್ನಡ ಎಂದಿಗೂ ಮರೆಯದೆ ಕಲಿಯೋ
ಕನ್ನಡ ನಾಡಿನ ಕೂಸೆ
ಕನ್ನಡ ಮರೆತರೆ ಕಾಪಾಡುವರಿಲ್ಲ
ಕನ್ನಡ ಕರುಳಿನ ಭಾಷೆ

ಹರಿಯುವ ನದಿಯಲಿ ಜಿನುಗುವ ತೊರೆಯಲಿ
ಕನ್ನಡ ಜೋಗುಳ ನಾದ
ಓಡುವ ಅಲೆಯಲಿ ಆಡುವ ನವಿಲಲಿ
ಕನ್ನಡ ತನದ ಧ್ಯಾನ

ಅರಳಿದ ಹೂವಲಿ ಚಂದನ ಮರದಲಿ
ಬೆರೆತಿದೆ ಕನ್ನಡ ಉಸಿರು
ಟೊಂಗೆಯನೇರಿದ ಗಿಳಿ ಕೋಗಿಲೆಯು
ಉಲಿದಿದೆ ಕನ್ನಡ ಹೆಸರು

ಸವಿಜೇನಿನಲಿ ಸಿಹಿಮಧು ಬೆರೆಸಿ
ಕನ್ನಡ ಕಲಿತು ಕಲಿಸು
ಕನ್ನಡ ನಾಡಿನ ನೆಲದಲಿ ಹುಟ್ಟಿ
ಕನ್ನಡ ಭಾಷೆ ಮೆರೆಸು

ತನುವನು ಹಾಸಿ ಎದೆಯನು ತೆರೆದು
ಕನ್ನಡ ತೇರನು ಎಳೆಸು
ಕನ್ನಡ ನನ್ನ ಪ್ರಾಣವೆನ್ನುತ
ದಿಕ್ಕು ದಿಕ್ಕಿಗು ಧ್ವನಿಸು

ಕನ್ನಡ ಪದಗಳ ಮಾತೆ ಮುತ್ತು
ಪಂಪ ಕುವೆಂಪು ಓದಿಸು
ಕನ್ನಡ ರತ್ನ ಕೊರಳಲಿ ಧರಿಸಿ
ಬೀಗುತ ಢಿಂಢಿಂ ಬಾರಿಸು

ಎಳೆಯ ಹೃದಯದಿ ಗೆಳೆಯರ ಜೊತೆಯಲಿ
ಕನ್ನಡ ನೇಹಗೊಳಿಸು
ಮಮತೆ ಬೆರೆಸಿ ಹಾಲನು ಕುಡಿಸಿದ
ಕನ್ನಡ ತಾಯಿಗೆ ನಮಿಸು

